# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಗದಗ ಜಿಲ್ಲೆ, ನರಗುಂದ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಕುರಿತು.

:—:—:

ಓದಲಾಗಿದೆ :

1.) ಸರ್ಕಾರದ ಆದೇಶ ಸಂಖ್ಯೆ: ನಅಇ 47 ಟಿಟಿಪಿ 98 ದಿ: 21—03—98.

2) ಮುಖ್ಯಾಧಿಕಾರಿ, ಯೋಜನಾ ಪ್ರಾಧಿಕಾರ, ಪುರಸಭೆ, ನರಗುಂದ, ಇವರ ಪತ್ರ ಸಂಖ್ಯೆ: ಪುಸನ:ನಯೋಪ್ರಾ:ಸಮ.ಯೋ:2000—2001:167 ದಿನಾಂಕ 20—06—2000.

3) ನಗರ ಯೋಜನಾ ನಿರ್ದೇಶಕರ ಪತ್ರ ಸಂಖ್ಯೆ: ನಯೋ:ಉನಿಕೆ: ಸಮಅಯೋ:ನ:95:2000—01 ದಿನಾಂಕ 16—08—2000.

:—:—:

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ನರಗುಂದ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಸಮಗ್ರಾಭಿವೃದ್ಧಿ ಯೋಜನೆಗೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯಾಧಿಕಾರಿ, ಯೋಜನಾ ಪ್ರಾಧಿಕಾರ, ಪುರಸಭೆ, ನರಗುಂದ ಇವರು ತಾತ್ಕಾಲಿಕ ಅಭಿವೃದ್ಧಿ ಯೋಜನೆಯನ್ನು ನಿಯಮದಂತೆ ಸಾರ್ವಜನಿಕ ಸಲಹೆ ಸೂಚನೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಅವರಿಂದ ಬಂದ ಸಲಹೆಗಳನ್ನು ದಿನಾಂಕ 08—02—99 ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಪರಿಶೀಲಿಸಿ, ಪರಿಗಣಿಸಲು ನಿರ್ಣಯಿಸಿ, ಅವುಗಳನ್ನು ಯೋಜನೆಗಳಲ್ಲಿ ಅಳವಡಿಸಿಕೊಂಡು ಅಂತಿಮಗೊಳಿಸಲಾಗಿದೆ. ಮತ್ತು ನಗರ ಯೋಜನಾ ನಿರ್ದೇಶಕರು ನೀಡಿದ ಅಗತ್ಯ ಸಲಹೆ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಸ್ಥಳೀಯ ಯೋಜನಾ ಪ್ರದೇಶದ ಹಾಗೂ ಸಮಗ್ರಾಭಿವೃದ್ಧಿ ಯೋಜನೆಯ ನಕ್ಷೆಗಳನ್ನು ತಯಾರಿಸಿ ನಗರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ನಗರ ಯೋಜನಾ ನಿರ್ದೇಶಕರು, ನರಗುಂದ ಸ್ಥಳೀಯ ಯೋಜನಾ ಪ್ರದೇಶದ ಸಮಗ್ರಾಭಿವೃದ್ಧಿ ಯೋಜನೆಯನ್ನು 2011 ನೇ ಇಸವಿಗೆ ಅಂದಾಜಿಸಲಾದ 51,000 ಜನಸಂಖ್ಯೆಗೆ ತಯಾರಿಸಲಾಗಿದ್ದು, ಯೋಜನೆಯಲ್ಲಿ ಅಭಿವೃದ್ಧಿಗಾಗಿ ಒಟ್ಟು 550.00 ಹೆಕ್ಟೇರ ಪ್ರದೇಶವು ಬೇಕಾಗಬಹುದೆಂದು ಲೆಕ್ಕ ಹಾಕಲಾಗಿದೆ. ಈ ಪೈಕಿ 301.80 ಹೆಕ್ಟೇರ ಪ್ರದೇಶವನ್ನು ವಸತಿಗಾಗಿ (ಶೇ. 54.87), 15.13 ಹೆಕ್ಟೇರ ಪ್ರದೇಶವನ್ನು ವಾಣಿಜ್ಯಕ್ಕಾಗಿ (ಶೇ. 2.75) ಹಾಗೂ 24.83 ಹೆಕ್ಟೇರ ಪ್ರದೇಶವನ್ನು ಉದ್ದಿಮೆಗಾಗಿಯೂ (ಶೇ. 4.52) ಕಾಯ್ದಿರಿಸಲಾಗಿದೆಯೆಂದು ತಿಳಿಸಿರುತ್ತಾರೆ. ಮುಂದುವರಿದು ಇನ್ನಿತರೆ ನಾಗರೀಕ ಸೌಲಭ್ಯಗಳಿಗೆ ಹಾಗೂ ಬಯಲು ಜಾಗೆ, ಉದ್ಯಾನವನಗಳಿಗೆ ಪಟ್ಟಣದ ಬೆಳವಣಿಗೆಯ ಅಗತ್ಯಕ್ಕೆ ಅನುಗುಣವಾಗಿ ಸೂಕ್ತ ಪ್ರದೇಶಗಳನ್ನು ನಿಗದಿಗೊಳಿಸಲಾಗಿದೆ ಮುಖ್ಯ ರಸ್ತೆಗಳ ವಿಸ್ತರಣೆಗೆ ಅನುಕೂಲವಾಗುವಂತೆ ಕಟ್ಟಡರೇಖೆಗಳನ್ನು ಪ್ರಸ್ತಾಪಿಸಲಾಗಿದ್ದು ಯೋಜನೆಯನ್ನು ಕಾರ್ಯಾನುಷ್ಠಾನಕ್ಕೆ ತರಲು ಅಗತ್ಯವಾದ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಸದರಿ ಸಮಗ್ರಾಭಿವೃದ್ಧಿ ಯೋಜನೆಯ ವರದಿ ಹಾಗೂ ನಕ್ಷೆಗಳನ್ನು ಸಾಮಾನ್ಯವಾಗಿ ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಕಾಯಿದೆ 1961 ರ ಕಲಂ 12 ರಲ್ಲಿ ನಿರೂಪಿಸಿರುವ ಅಂಶಗಳಿಗೆ ಅನುಗುಣವಾಗಿ ತಯಾರಿಸಿರುವುದನ್ನು ಗಮನಿಸಲಾಗಿದೆ. ಸಮಗ್ರಾಭಿವೃದ್ಧಿ ಯೋಜನೆಯ ವರದಿಯಲ್ಲಿನ ಪುಟ ಸಂಖ್ಯೆ: 47 ಹಾಗೂ 48 ರಲ್ಲಿ ಉಪ ವಿಭಜನೆ ನಿಯಮಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ತಯಾರಿಸಬೇಕಾದ ವಲಯ ನಿಯಮಾವಳಿಯನ್ನು

....2..

ಪುರಸಭೆ ಕಾರ್ಯಾಲಯ,
47
T.P.
ದಿನಾಂಕ 19-10-2000

ಅಳವಡಿಸಲಾಗಿದ್ದು, ಈ ಉಪ ವಿಭಜನೆ ನಿಯಮಗಳನ್ನು ಯೋಜನೆಯನ್ನು ಕಾರ್ಯಾನುಷ್ಠಾನಕ್ಕೆ ತರುವ ಹಂತದಲ್ಲಿ ಪಾಲಿಸತಕ್ಕದ್ದು ಎಂಬ ನಿಬಂಧನೆಯನ್ನು ವಿಧಿಸುವಂತೆ ಸೂಚಿಸಿರುತ್ತಾರೆ. ಹಾಗೂ ಗದಗ ಜಿಲ್ಲೆ, ನರಗುಂದ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಕಾಯಿದೆ 1961 ರ ಕಲಂ 13 (3) ರ ಅನ್ವಯ ಅಂತಿಮ ಅನುಮೋದನೆ ನೀಡುವಂತೆ ನಗರ ಯೋಜನಾ ನಿರ್ದೇಶಕರು ಕೋರಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 58 ಬೆಮಪ್ರಾ 2000, ಬೆಂಗಳೂರು, ದಿನಾಂಕ : 3-10-2000.

---

ಗದಗ ಜಿಲ್ಲೆ, ನರಗುಂದ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13 (3) ರನ್ವಯ ಸರ್ಕಾರದ ಅಂತಿಮ ಅನುಮೋದನೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀಡಲಾಗಿದೆ.

"ಸಮಗ್ರಾಭಿವೃದ್ಧಿ ಯೋಜನೆಯ ವರದಿಯಲ್ಲಿನ ಪುಟ ಸಂಖ್ಯೆ: 47 ಹಾಗೂ 48 ರಲ್ಲಿ ಉಪ ವಿಭಜನೆ ನಿಯಮಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ತಯಾರಿಸಲಾದ ವಲಯ ನಿಯಮಾವಳಿಯನ್ನು ಅಳವಡಿಸಲಾಗಿದ್ದು, ಈ ಉಪ ವಿಭಜನೆ ನಿಯಮಗಳನ್ನು ಯೋಜನೆಯನ್ನು ಕಾರ್ಯಾನುಷ್ಠಾನಕ್ಕೆ ತರುವ ಹಂತದಲ್ಲಿ ಪಾಲಿಸತಕ್ಕದ್ದು"

ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ಎಲ್ಲಾ ನಕಾಶೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಸಹಿ/-
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಅಹಮದ ಎ. ಮುಖ್ತದರ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಇವರಿಗೆ :–

1) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು
2) ಮುಖ್ಯಾಧಿಕಾರಿ, ಯೋಜನಾ ಪ್ರಾಧಿಕಾರ, ಪುರಸಭೆ, ನರಗುಂದ, ಗದಗ ಜಿಲ್ಲೆ.
3) ಸಹಾಯಕ ನಗರ ಯೋಜನಾ ನಿರ್ದೇಶಕರು, ನಗರ ಯೋಜನಾ ಇಲಾಖೆ, ಗದಗ
4) ವಾರದ ಗೆಜೆಟ
5) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

ಕೆ.ಎಮ್.